C.R.P.67
Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No.123/2022 ಪಿ.ಡಬ್ಲ್ಯೂ-4 ಸಿ.ಡಬ್ಲ್ಯೂ-13

ದಿನಾಂಕಃ- 13.02.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಕೃಷ್ಣಪ್ಪ. ಕೆ. ವಿ. |
| ತಂದೆಯ ಹೆಸರು | ಕೆ.ಜಿ. ವೆಂಕಟರಾಮಯ್ಯ |
| ವಯಸ್ಸು | 59 ವರ್ಷ |
| ಉದ್ಯೋಗ | PI, high ground traffic police station Bangalore |
| ವಾಸ | Bangalore |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು ದಿಃ16.01.2019 ರಿಂದ 01.03.2020 ರವರೆಗೆ ಶ್ರೀರಂಗಪಟ್ಟಣ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿದ್ದೇನೆ.

2. ದಿಃ 28.09.2019 ರಂದು ಈ ಪ್ರಕರಣದ ಕಡತವನ್ನು ಚಾಸಾ-1 ನೇ ಸತೀಶ ಅರಕೆರೆ PSI ರವರಿಂದ ಪಡೆದಿದ್ದೇನೆ.

3. ನಾನು ದಿಃ 28.09.2019 ರಂದು ಚಾಸಾ-2 ನೇ ಪ್ರಕಾಶ, ಚಾಸಾ-3 ನೇ ಹನುಮಂತ ರಾಜು ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ.

4. ನಾನು 28.09.2019 ರಂದು ಪೋಲಿಸ್ ಸಿಬ್ಬಂದಿಯಾದ ಚಾಸಾ-5 ರಿಂದ 9 ನೇ ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ.

5. ನಾನು ದಿಃ 01.10.2019 ರಂದು ಜಿಲ್ಲಾ ಪೊಲಿಸ್ ಅಧೀಕ್ಷಕರ ಮೂಲಕ ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಸ್ಪೋಟಕ ವಸ್ತುಗಳನ್ನು ನಾಶಪಡಿಸಿಕೊಡಲು ಬೆಂಗಳೂರು BDDS ಅಧಿಕಾರಿಗಳಿಗೆ ಪತ್ರ ಕಳುಹಿಸಿದ್ದೇನೆ.

6. ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಸ್ಪೋಟಕ ವಸ್ತುಗಳನ್ನು 01.10.2019 ರಂದು ಪಾಂಡವಪುರ ಚಂದ್ರಾ ಬಡಾವಣೆಯಲ್ಲಿ ಇರುವ ನಾಜಿಂ ಉಲ್ಲಾ ರವರ ಮಾಲೀಕತ್ವದ ಸಂಗ್ರಹಾಲಯದ ಸಿಬ್ಬಂದಿಗೆ ನಾನು ಕೊಟ್ಟಿದ್ದೇನೆ.

7. ನಾನು 16.10.2019 ರಂದು ನಿರೀಕ್ಷಣಾ ಜಾಮೀನು ಆದೇಶದ ಪ್ರತಿಯನ್ನು ಹಿಡಿದುಕೊಂಡು ನನ್ನ ಸಮಕ್ಷಮ ಹಾಜರಾದ 1 ನೇ ಆರೋಪಿ ರಾಮ್ ದೇವ ರವರನ್ನು ದಸ್ತಗಿರಿ ಮಾಡಿ ವಿಚಾರಣೆ ಮಾಡಿ ಅವರು ಹೇಳಿದ ವಿಚಾರಗಳನ್ನು ದಾಖಲಿಸಿಕೊಂಡು ಅವರು ಕೊಟ್ಟ 824/19.08.2016 ನೇ ಗಣಿಗಾರಿಕೆ ಪರವಾನಗಿಯ ಪ್ರತಿಯನ್ನು ಪಡೆದುಕೊಂಡು ಜಾಮೀನಿನ ಮೇಲೆ ಬಿಟ್ಟಿದ್ದೇನೆ.

8. ನಾನು 20.11.2019 ರಂದು BDDS ಅಧಿಕಾರಿಯಾದ ಚಾಸಾ-10 ನೇ ರವರು ಸ್ಪೋಟಕ ವಸ್ತುಗಳನ್ನು ನಾಶಪಡಿಸಿ ಉಳಿದ ಅವಶೇಷಗಳನ್ನು ಸಂಗ್ರಹಿಸಿ ಕೊಟ್ಟಿದ್ದನ್ನು ಪಡೆದು ರಾಸಾಯನೀಕ ಪರೀಕ್ಷೆಗಾಗಿ ಬೆಂಗಳೂರು RFSL ಕಛೇರಿಗೆ ಕಳುಹಿಸಿದ್ದೇನೆ.

9. ಈ ಸಾಕ್ಷಿ ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ 8 ಡಬ್ಬಿಗಳನ್ನು ಚಾಸಾ-10 ನೇ ರವರಿಂದ ಪಡೆದು ರಾಸಾಯನೀಕ ಪರೀಕ್ಷೆಗಾಗಿ ಬೆಂಗಳೂರು RFSL ಕಛೇರಿಗೆ ಕಳುಹಿಸಿದ್ದಾಗಿ ಗುರುತಿಸಿದ್ದಾರೆ .

10. ಈ ಸಾಕ್ಷಿ ಮೇಲೆ ಹೇಳಿದಂತೆ ಗುರುತಿಸಿದ 8 ಡಬ್ಬಿಗಳನ್ನು ಅವುಗಳಲ್ಲಿ ಇರುವ ವಸ್ತುಗಳ ಸಮೇತ ಎಂಓ-1 ರಿಂದ 8 ಎಂದು ಗುರುತಿಸಲಾಯಿತು.

11. ದಿಃ 01.03.2020 ರಂದು ಈ ಪ್ರಕರಣದ ಕಡತವನ್ನು ಚಾಸಾ-14 ನೇ ಕೆ ಆರ್ ಸಾಗರ CPI ರವರ ಕೈಗೆ ಕೊಟ್ಟಿದ್ದೇನೆ.

12. ಈ ಸಾಕ್ಷಿ ಕಡತದಲ್ಲಿ ಇರುವ 824/19.08.2016 ನೇ ದಿನಾಂಕದ ಗಣಿಗಾರಿಕೆ ಪರವಾನಗಿಯ ಪ್ರತಿ ಮತ್ತು 20.11.2019 ರಂದು ಚಾಸಾ–10 ನೇ ರವರು ಕೊಟ್ಟಿದ್ದ ಪತ್ರದ ಮೇಲೆ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿ ಇರುವ ಮೇಲೆ ವಿವರಿಸಿದ ದಾಖಲೆಗಳನ್ನು ನಿಪಿ–5 ಮತ್ತು 6 ಎಂದೂ ಮತ್ತು ಈ ಸಾಕ್ಷಿಯ ಸಹಿಗಳನ್ನು ನಿಪಿ–5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು.

13. ನ್ಯಾಯಾಲಯದಲ್ಲಿ ಹಾಜರಿರುವ 1 ನೇ ಆರೋಪಿ ರಾಮ್ ದೇವ್ 16.10.2019 ರಂದು ನನ್ನ ಸಮಕ್ಷಮ ನಿರೀಕ್ಷಣಾ ಜಾಮೀನು ಅದೇಶದ ಪ್ರತಿ ಹಿಡಿದುಕೊಂಡು ಹಾಜರಾಗಿದ್ದರು.

ಪಾಟೀ ಸವಾಲುಃ– ಆರೋಪಿತರ ಪರವಾಗಿ ಶ್ರೀಮತಿ. ಸ್ಮಿತಾ ವಕೀಲರಿಂದಃ–

1. ನನ್ನ ಸಮಕ್ಷಮ ಚಾಸಾ–2 ನೇ ಪ್ರಕಾಶ ಮತ್ತು ಚಾಸಾ–3 ನೇ ಹನಮಂತರಾಜು ಯಾವುದೇ ರೀತಿಯ ಹೇಳಿಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

2. ನನ್ನ ಸಮಕ್ಷಮ 1 ನೇ ಆರೋಪಿ ರಾಮ್ ದೇವ್ ಸ್ವ ಇಚ್ಚೆಯಿಂದ ಯಾವುದೇ ವಿಚಾರ ಹೇಳಿಲ್ಲ ಎನ್ನುವುದು ಸರಿಯಲ್ಲ.

3. ನಾನು ಮತ್ತು ಚಾಸಾ–10 ನೇ ರವರು ಸೇರಿಕೊಂಡು ಎಂಒ–1 ರಿಂದ 8 ರವರೆಗೆ ಗುರುತಿಸಿರುವ ವಸ್ತುಗಳನ್ನು ಮತ್ತು ನಿಪಿ–6 ರಲ್ಲಿ ಗುರುತಿಸಿರುವ ದಾಖಲೆಯನ್ನು ಸೃಷ್ಟಿಸಿಕೊಂಡಿದ್ದೇವೆ ಎನ್ನುವುದು ಸರಿಯಲ್ಲ.

4. ನಾನು ಈಗ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜಿ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.